ಬೆಳಗಿನ ಎಂಟು ಗಂಟೆಯ ಸಮಯ. ತರಕಾರಿ ಮಾರುವ ವೃದ್ಧ ಬಂದಿದ್ದಾನೆ. ಅಶೋಕ ಚಹಾ ಗುಟುಕರಿಸುತ್ತಾ ತಲೆಯೆತ್ತಿ ನೋಡಿದ. ತಲೆಯಲ್ಲಿ ಹರಿದ ಬಟ್ಟೆಯ ಪೇಟ, ಎದೆಯಲ್ಲಿ ಬಿಳಿ ಕೂದಲುಗಳು, ಹೊಟ್ಟೆಯ ಮೇಲೆ ಕಜ್ಜಿಗಳು... ಅವನೇ ಇವನು. ಆದರೆ ಹೆಸರೇನು? ಗೋಪಿಆ? ಮಘುಆ? ಜಗುಆ? ಅಲ್ಲ. ವೃದ್ಧನ ಬಗ್ಗೆ ಅವನಿಗೆಲ್ಲವೂ ತಿಳಿದಿದೆ. ತಿಳಿಯಲು ಕಾರಣವೂ ಇದೆ. ಯೋಚಿಸುತ್ತಲೇ ಅವನ ಎರಡು ಕೋಣೆಯ ಗುಡಿಸಲು, ಸುತ್ತಮುತ್ತ ಘೇರಾಯಿಸಿದ ಬೇಲಿ ಎಲ್ಲವೂ ಎದುರಿಗೆ ಬರುತ್ತವೆ. ಅವನು ಗಲ್ಲಿಯಿಂದ ಬೇರೆ ಸ್ಥಳದಲ್ಲಿದ್ದಾನೆ. ವೃದ್ಧನ ಹರೆಯದ ಮಗಳನ್ನು ಅವಳ ಗಂಡ ತ್ಯಜಿಸಿದ್ದಾನೆ. ಅದೊಂದು ದಿನ ವೃದ್ಧ ಹೇಳಿದ್ದ: "ಅಶೋಕ ಬಾಬು, ಸ್ವಲ್ಪ ನನ್ನ ಮಾತನ್ನು ಸಹ ಕೇಳಿ? ಅವನು ಮಗಳಿಗೆ ಹೊಡೆದು ಬಡಿದು ಮನೆಯಿಂದ ಹೊರಗಟ್ಟಿ, ಇನ್ನೊಬ್ಬಳನ್ನು ಕರೆತಂದಿದ್ದಾನೆ. ಅತ್ತ ಅವನು ಮನಸಾರೆ ತಿನ್ನುತ್ತಾ ಮಜ ಮಾಡುತ್ತಿದ್ದಾನೆ, ಇತ್ತ ಇವಳು ಉಪವಾಸ ಸಾಯುತ್ತಿದ್ದಾಳೆ. ಅಶೋಕ್ ಬಾಬು, ನೀವು ಅವನ ಕಿವಿ ಹಿಡಿದು ಅವಳಿಗೆ ಅನ್ನ ಬಟ್ಟೆ ಕೊಡಿಸಿ, ನಿಮಗೆ ಹೆಸರುಕೀರ್ತಿ ಬರುತ್ತೆ, ಈ ಮುದುಕ ನಿಮಗೆ ಆಶೀರ್ವಾದ ಮಾಡುತ್ತಾನೆ."

"ಸರಿ, ಒಂದು ದಿನ ನಿಮ್ಮ ಮನೆಗೆ ಹೋಗೋಣ; ನಿನ್ನ ಮಗಳ ಹತ್ತಿರ ಎಲ್ಲಾ ವಿಷಯಗಳನ್ನು ಕೇಳಿ ನಂತರ ಉಪಾಯ ಮಾಡೋಣ." ಎಂದ ಅಶೋಕ.

ಅವನು ಹೋಗಿಯೂ ಇದ್ದ. ಅದು ಇನ್ನೂ ನೆನಪಿದೆ ಕೂಡ. ಅಂಥ ಸೌಂದರ್ಯವನ್ನು ದೇವರು ಅಜಾಗರೂಕತೆಯಿಂದ ಕೊಳೆಯಲು ಬಿಡುವನೇ? ಅಶಿಕ್ಷಿತರ ಮನಸ್ಸಿನಲ್ಲಿ ಅಷ್ಟು ಚಾತುರ್ಯ ಮತ್ತು ಭಾವನೆಗಳನ್ನು ಭರಿಸುವನೇ? ವರ್ಷವಿಡೀ ಅವರ ಸಂಪರ್ಕವಿತ್ತು. ಅನ್ನ ಬಟ್ಟೆಗೆ ವ್ಯವಸ್ಥೆಯಾಯಿತು, ಇನ್ನೂ ಅಲ್ಪ ಸ್ವಲ್ಪ ಲಭಿಸುತ್ತಿತ್ತು, ಆದರೆ ಸಿಡುಬಿನ ಹಿಡಿತಕ್ಕೆ ಸಿಲುಕಿ ಅದೊಂದು ದಿನ ಅಕಾಲದಲ್ಲಿ ಆ ಹೂವು ಬಾಡಿ ಹೋಯಿತು. ಮಗಳು ಸತ್ತಳು. ವೃದ್ಧ ಈಗಲೂ ತರಕಾರಿಗಳನ್ನು ಮಾರುತ್ತಾನೆ. ಅವಳ ನೆನಪುಗಳನ್ನು ಮರೆಯಬೇಕೆಂದರೂ, ಮರೆಯಲಾಗುತ್ತಿಲ್ಲ. ಆದರೆ ಅವಳ ಹೆಸರೇನು? ಉಮಾ? ರಮಾ? ಮಲ್ಲಿ? ನೆನಪಿಲ್ಲ.

"ಏಯ್, ಅಜ್ಜ!"

ಅವನಲ್ಲಿ ಹೆಸರು ಕೇಳಲೇ? ವೃದ್ಧ ಏನೆಂದುಕೊಳ್ಳುವನೋ. ಸ್ವಚ್ಛವಾಗಿರುವವರ ಮನಸ್ಸೇ ಹೀಗೆ; ಕೆಲಸ ಮುಗಿಯುತ್ತಲೇ ಮನಸ್ಸಿನಿಂದ ಹೊರಗೆ ಹೋಗುತ್ತಾರೆ. ಇಷ್ಟು ಸ್ನೇಹ, ಗೌರವ, ಇಷ್ಟು ದಿನಗಳ ಸುಖದ ನೆನಪುಗಳು... ಮನಸ್ಸಿನೊಳಗೆ ಇಂದೂ ಸಹ ಅವನಿದ್ದಾನೆ. ಅವನ ಬಗ್ಗೆ ಯೋಚಿಸುತ್ತಲೇ ಕಣ್ಣುಗಳು ತುಂಬಿ ಬರುತ್ತವೆ. ಆದರೆ ಅವನ ಹೆಸರು ನೆನಪಿಲ್ಲ. ಕೇಳಿದರೆ ವೃದ್ಧ ಕ್ಷಮಿಸುವುದಿಲ್ಲವೆಂದು ಮನಸ್ಸು ಹೇಳುತ್ತದೆ. ಅವನ ಅಳಿಯನ ಬಗ್ಗೆ ಪ್ರಸ್ತಾಪವಾದಾಗ, ಹಳದಿ ಹಳದಿಯಾದ, ಒಳಗೆ ಹೋದ ಕಣ್ಣುಗಳನ್ನು ದೊಡ್ಡದು ಮಾಡಿ ನೋಡುತ್ತಾನೆ.

"ಏನು, ಬಾಬುಜಿ?"

ವಿಷಯವನ್ನು ಬದಲಾಯಿಸುತ್ತಾ, ಅತೀತದ ನೆನಪುಗಳಲ್ಲಿ ಕಳೆದು ಹೋಗುತ್ತಾ, ಅನ್ಯಮನಸ್ಕನಂತೆ ಅಶೋಕ ಹೇಳಿದ, "ಕವಳೆಕಾಯಿ ಮಾರಲು ತಂದಿದ್ದೀಯ ಅಂತ ಕೇಳಿದೆ".

"ಕವಳೆಕಾಯಿ? ಕವಳೆಕಾಯಿಯನ್ನು ನಾನೆಂದೂ ತರುವುದಿಲ್ಲ, ಬಾಬೂಜಿ! ಈ ದಿನಗಳಲ್ಲಿ ಕವಳೆಕಾಯಿ ಎಲ್ಲಿ ಸಿಗುತ್ತದೆ? ಇನ್ನೂ ಹೀಚು ಸಹ ಆಗಿಲ್ಲವೇನೋ..."

ವೃದ್ಧ ಆಶ್ಚರ್ಯದಿಂದ ನೋಡುತ್ತಿದ್ದ.

ಅಶೋಕ ಎದ್ದು ಒಳಗೆ ಹೋದ.

ಆಗಿನಿಂದ ಅವನು ಸಾಕಷ್ಟು ಕಳವಳಗೊಂಡಿದ್ದಾನೆ, ಅವನಿಗೆ ಹೆಸರು ನೆನಪಿರುವುದಿಲ್ಲ. ಇದು ಇಂದಿನ ಸಂಗತಿಯಲ್ಲ, ಯೋಚನೆ ಮಾಡಿದಾಗ, ಅವನು ಕಳೆದ ಅನೇಕ ದಿನಗಳಿಂದ ಹೀಗಿದ್ದಾನೆಂದು